UNIVERSITY OF AGRICULTURAL SCIENCES, BANGALORE
Administrative Office, GKVK, Bengaluru – 560 065.

No.AO/RT/11/63/Officers Posts/2023-24 Date: 08-11-2023

NOTIFICATION

Sub:Recruitment of Officers Posts in the University of Agricultural Sciences, Bangalore.

Applications are invited from eligible candidates for filling up of the following Officers Posts in UAS, Bangalore: **1.Director of Research, 2. Director of Extension, 3. Dean (Student Welfare), 4. Dean (Post Graduate Studies), 5.Dean (Seri.)**, College of Sericulture, Chintamani – (reserved for Kalyana Karnataka) & **6. University Librarian** in the **Pay Scale** of Rs.1,44,200-2,18,200. Detailed Qualification, Score-card and Application Proforma can be downloaded from the official website of the University **(Website: www.uasbangalore.edu.in)**.Last date for receipt of filled in application is **08-12-2023.**

By Order
Sd/-**Administrative Officer**

09-11-2023
Times of Ind Pg 15

For more information visit
University Library Website
Web - uasbagrilibindia.org
E-mail- librarian@uasbangalore.edu.in

09-11-2023
Hindu Pg 02

UNIVERSITY OF AGRICULTURAL SCIENCES BENGALURU
Estate Office, GKVK, Bengaluru-560 065.

No. EO/SPO/e-Proc/142/2023-24 Date: 06-11-2023

TENDER NOTIFICATION
(Through e-Procurement Portal only)

The University of Agricultural Sciences, Bengaluru has invited Tender in the prescribed form as per the Standard tender document KG-1 & KG-2, from the reputed firms for the procurement of the following equipment's. **Sl No. 1 to 7.** The details of the KG-1 & KG-2, Tender Notification, Schedule, Specifications are available in the website website: **kppp.karnataka.gov.in.** The cost of the Tender document is as per e-procurement portal NORMS. The EMD shall be paid using e-procurement payment modes.

Blank Tender Documents can be downloaded from **kppp.karnataka.gov.in.** Last date and time for uploading the tender on **17-11-2023 up to 4.00 p.m. The Technical Bid will be opened: 20-11-2023 at 10:30 a.m. The Financial bid will be opened on 25.11.2023 at 10:30 a.m.** in the Tender Committee room of Estate Office. Further details can be had from the office of the undersigned during working hours and also refer UAS **Website: www.uasbangalore.edu.in.** Helpdesk: **91-8046010000, +91-8068948777 support@eprochelpdesk.com.** The University reserves the right to accept or reject any or all the tenders without assigning any reasons. Tender will be under two cover system and the conditions for two cover systems is also uploaded in the website.

DIPR/CP/RO/2044/2023-24

Sd/-
ESTATE OFFICER

09-11-2023
Prajavani Pg 07

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಡಳಿತ ಕಚೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು – 560065.

ನಂ.ಎಒ/ಆರ್.ಟಿ/11/63/ಅಧಿಕಾರಿ ಹುದ್ದೆಗಳು/2023–24 ದಿನಾಂಕ : 08.11.2023

ಪ್ರಕಟಣೆ

ವಿಷಯ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ, ಅಧಿಕಾರಿ ಹುದ್ದೆಗಳಿಗೆ ನೇಮಕಾತಿ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಈ ಕೆಳಕಂಡ ಅಧಿಕಾರಿ ಹುದ್ದೆಗಳನ್ನು ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 1. ಸಂಶೋಧನಾ ನಿರ್ದೇಶಕರು, 2. ವಿಸ್ತರಣಾ ನಿರ್ದೇಶಕರು, 3. ಡೀನ್ (ವಿದ್ಯಾರ್ಥಿ ಕಲ್ಯಾಣ), 4. ಡೀನ್ (ಸ್ನಾತಕೋತ್ತರ), 5. ಡೀನ್ (ರೇಷ್ಮೆಕೃಷಿ), ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿ (ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ), 6. ವಿಶ್ವವಿದ್ಯಾನಿಲಯದ ಗ್ರಂಥಪಾಲಕರು, ವೇತನ ಶ್ರೇಣಿ ರೂ. 1,44,200 – 2,18,200. ವಿದ್ಯಾರ್ಹತೆ, ಸ್ಕೋರ್ ಕಾರ್ಡ್ ಮತ್ತು ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.uasbangalore.edu.in) ನಿಂದ ಡೌನ್‌ಲೋಡ್ ಮಾಡಿಕೊಳ್ಳ ಬಹುದು. ಭರ್ತಿ ಮಾಡಲಾದ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ : 08.12.2023.

ಆದೇಶದ ಮೇರೆಗೆ
ಸಹಿ/– ಅಡಳಿತಾಧಿಕಾರಿಗಳು

09-11-2023
Kannadaprabha- Pg 04

ಡಿ.9ರಿಂದ ಆರ್ಟ್ ಆಫ್ ಲಿವಿಂಗ್ ಸಾವಯವ ಕೃಷಿ ಮೇಳ

3 ದಿನ ವಿಶ್ವ ಸಿರಿಧಾನ್ಯಗಳ ನೈಸರ್ಗಿಕ ಮೇಳ, ಕೃಷಿ ವಸ್ತು ಪ್ರದರ್ಶನ | 50000 ಜನ ಭಾಗಿ ನಿರೀಕ್ಷೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಇಲ್ಲಿಯ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಶ್ರೀ ಶ್ರೀ ನೈಸರ್ಗಿಕ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಡಿಸೆಂಬರ್9, 10 ಹಾಗೂ 11 ರಂದು 'ವಿಶ್ವ ಸಿರಿಧಾನ್ಯಗಳ ಸಾವಯವ ಮತ್ತು ನೈಸರ್ಗಿಕ ಕೃಷಿ ಮೇಳ ಹಾಗೂ ಕೃಷಿ ವಸ್ತು ಪ್ರದರ್ಶನ' ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಆವರಣದಲ್ಲಿ ಜರುಗಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ.ಸುರೇಶ್, ಬೆಂಗಳೂರಿನಲ್ಲಿ ಮೊದಲ ಬಾರಿಗೆ ಜಾಗತಿಕ ಕೃಷಿ ಮೇಳ ನಡೆಯುತ್ತಿದೆ. 3 ದಿನಗಳಲ್ಲಿ ನೈಜ ಕೃಷಿ ಕ್ಷೇತ್ರದಲ್ಲಿ ಆಗುತ್ತಿರುವ ಗುಣಾತ್ಮಕ ಬದಲಾವಣೆ ಮತ್ತು ತಂತ್ರಜ್ಞಾನ ಬಳಕೆ ಕುರಿತು ವಿಸ್ತೃತ ವಿಚಾರ ಮಂಥನ ನಡೆಯಲಿದೆ. ಸುಮಾರು 180 ಕ್ಕೂ ಹೆಚ್ಚು ಮಳಿಗೆ ತೆರೆಯಲಿದ್ದು, ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿಗೆ ಅಗತ್ಯವಾದ ಪರಿಕರ,



ಬೀಜ, ಮಾರುಕಟ್ಟೆ ವ್ಯವಸ್ಥೆ, ಅಧಿಕ ಇಳುವರಿ ಸಾಧಿಸಲು ಇರುವ ಬೇಸಾಯ ಕ್ರಮದ ಮಾಹಿತಿ ಇರಲಿದೆ. ಜೊತೆಗೆ ಬೃಹತ್ ಕೃಷಿ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗುತ್ತಿದ್ದು, ಜಾಗತಿಕ ಮಟ್ಟದಲ್ಲಿ ವ್ಯಾಪಕ ಮಹತ್ವ ಪಡೆದಿದೆ. ವಿದೇಶಗಳಿಂದಲೂ ಕೃಷಿ ತಜ್ಞರು, ಆಸಕ್ತ ರೈತರು ಈ ಮೇಳದಲ್ಲಿ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಮೇಳವು ಖರೀದಿದಾರರು ಹಾಗೂ ಮಾರಾಟಗಾರರ ಸಂಪರ್ಕ ಸೇತುವೆಯಾಗಿ ಕಾರ್ಯ ಮಾಡಲಿದೆ. ಪ್ರತಿ ದಿನ ಸುಮಾರು 15 ಸಾವಿರಕ್ಕೂ ಅಧಿಕ ಜನರು ಮೇಳದಲ್ಲಿ ಭಾಗವಹಿಸುತ್ತಿದ್ದು, ಒಟ್ಟು 3 ದಿನಗಳ ಅವಧಿಯಲ್ಲಿ ಸುಮಾರು 50 ಸಾವಿರಕ್ಕೂ ಅಧಿಕ ಜನತೆ ಈ ಮೇಳದ ಪ್ರಯೋಜನ ಪಡೆಯಲಿದ್ದಾರೆ ಎಂದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಶ್ರೀ ಶ್ರೀ ನೈಸರ್ಗಿಕ ವ್ಯವಸ್ಥಾಪಕದ ನಿರ್ದೇಶಕ ರಂಗನಾಥ ಪ್ರಸಾದ್, ರವೀಂದ್ರ ದೇಸಾಯಿ, ಉದಯಕುಮಾರ ಕೊಳ್ಳಿಮಠ ಇದ್ದರು.

ಆರ್ಟ್ ಆಫ್ ಲಿವಿಂಗ್‌ನಲ್ಲಿ ಡಿ.9ರಿಂದ 3 ದಿನ ವಿಶ್ವ ಸಿರಿಧಾನ್ಯ ಸಾವಯವ ಮೇಳ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಆರ್ಟ್ ಆಫ್ ಲಿವಿಂಗ್‌ನ ಶ್ರೀ ನೈಸರ್ಗಿಕ ಸಂಸ್ಥೆಯ ಸಹಯೋಗದಲ್ಲಿ ವಿಶ್ವ ಸಿರಿಧಾನ್ಯಗಳ ಸಾವಯವ ನೈಸರ್ಗಿಕ ಕೃಷಿ ಮೇಳವನ್ನು ಡಿ. 9, 10 ಹಾಗೂ 11 ರಂದು ಆಯೋಜಿಸಿದೆ.



ಈ ಕುರಿತು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್, ''ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ಆವರಣದಲ್ಲಿ ಇದೇ ಮೊದಲ ಬಾರಿಗೆ ಮೇಳ ಆಯೋಜಿಸಲಾಗಿದೆ. ಇದು ಸಾವಯವ ಮತ್ತು ನೈಸರ್ಗಿಕ ಕೃಷಿ ವಿಕಾಸ ಚಿಂತನೆಯ ಸಮಾವೇಶವಾಗಿ ಮೂಡಿಬರಲಿದ್ದು, ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಸಿ, ಬಳಸಲು ಪ್ರೇರಣೆ ನೀಡಲಿದೆ,'' ಎಂದರು.

''ವಿಶ್ವ ಸಿರಿಧಾನ್ಯಗಳ ಸಾವಯವ ನೈಸರ್ಗಿಕ ಕೃಷಿ ಮೇಳದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ ಭಾಗವಹಿಸಲಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಆಗುತ್ತಿರುವ ಗುಣಾತ್ಮಕ ಬದಲಾವಣೆ ಮತ್ತು ತಂತ್ರಜ್ಞಾನ ಬಳಕೆ ಕುರಿತು ಮೂರು ದಿನಗಳ ಕಾಲ ವಿಚಾರ ಮಂಥನ ನಡೆಯಲಿದೆ. ದೇಶ-ವಿದೇಶಗಳಿಂದ ಬರುವ 150ಕ್ಕೂ ಹೆಚ್ಚು ಸಾವಯವ ಕೃಷಿ ತಂತ್ರಜ್ಞರು, ವಿಜ್ಞಾನಿಗಳು, ರೈತ ಉತ್ಪಾದಕರುಗಳು ರೈತರ ಸಮಸ್ಯೆ-ಸವಾಲುಗಳಿಗೆ ಪರಿಹಾರ ನೀಡಲಿದ್ದಾರೆ. ಜತೆಗೆ ಸಿರಿಧಾನ್ಯಗಳ, ಸಾವಯವ ಮತ್ತು ನೈಸರ್ಗಿಕ ಕೃಷಿ ಸಂವರ್ಧನೆಗೆ ಪೂರಕ ಸಲಹೆ ನೀಡಲಿದ್ದಾರೆ,'' ಎಂದು ಮಾಹಿತಿ ನೀಡಿದರು.

''ಸಿರಿ ಧಾನ್ಯಗಳು, ಸಾವಯವ ಮತ್ತು ನೈಸರ್ಗಿಕ ಕೃಷಿಗೆ ಬೇಕಾದ ಅಗತ್ಯ ವಸ್ತುಗಳು, ಬೀಜಗಳು, ಮಾರುಕಟ್ಟೆ ವ್ಯವಸ್ಥೆ ಅಧಿಕ ಇಳುವರಿಯ ಬೇಸಾಯ ಕ್ರಮಗಳು ಸೇರಿದಂತೆ ನಾನಾ ಮಾಹಿತಿ ಒದಗಿಸುವ 150ಕ್ಕೂ ಹೆಚ್ಚು ಮಳಿಗೆಗಳು ಇರಲಿವೆ. ಇದರಲ್ಲಿ ರೈತರು, ರೈತ ಉತ್ಪಾದಕ ಸಂಸ್ಥೆಗಳು, ಆಹಾರ ಸಂಸ್ಕರಣಾ ಸಂಸ್ಥೆಗಳು, ರಫ್ತುದಾರರು, ಸರಕಾರಿ ಸಂಸ್ಥೆಗಳು ಸೇರಿದಂತೆ ವಿವಿಧ ಕೃಷಿ ಸಂಘಟನೆಗಳು ಭಾಗವಹಿಸಲಿವೆ. ಖರೀದಿದಾರರು ಹಾಗೂ ಮಾರಾಟಗಾರರ ಸಂಪರ್ಕ ಸೇತುವೆಯಾಗಿ ಮೇಳವು ಕೆಲಸ ಮಾಡಲಿದೆ,'' ಎಂದು ತಿಳಿಸಿದರು.

ಆರ್ಟ್ ಆಫ್ ಲಿವಿಂಗ್‌ನ ನೈಸರ್ಗಿಕ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಂಗನಾಥ ಪ್ರಸಾದ್, ಡಾ. ನಾಗರಾಜ್, ಉದಯಕುಮಾರ ಕೊಳ್ಳಿಮಠ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

09-11-2023
V-karanataka- Pg 07

ಲವಲವಿಕ GARDENಲೋಕ

ಚಳಿಗಾಲಕ್ಕೆ ಯಾವ ತರಕಾರಿ ಸೂಕ್ತ?



ಚಳಿಗಾಲದಲ್ಲಿ ತಾಪಮಾನ, ಆರ್ದ್ರತೆ ಹಾಗೂ ದಿನದ ಅವಧಿ ಕಡಿಮೆ ಇರುತ್ತದೆ. ಅದೇ ರೀತಿ ಬೇಸಿಗೆ ಕಾಲಕ್ಕೆ ಹೋಲಿಸಿದರೆ ಚಳಿಗಾಲದಲ್ಲಿ ದಿನದ ಅವಧಿ 1-2 ತಾಸು ಕಡಿಮೆ ಇರುತ್ತದೆ. ಈ ಹವಾಗುಣಕ್ಕೆ ಅನುಗುಣವಾಗಿ ಬೆಳೆ ಹಾಗೂ ತಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ಕಾಲಕ್ಕೆ ಸೂಕ್ತವಾದ ತರಕಾರಿ ಬೆಳೆಗಳೆಂದರೆ ಟೊಮೆಟೊ, ಆಲೂಗಡ್ಡೆ, ತಿಂಗಳ ಹುರುಳಿಕಾಯಿ, ಎಲೆಕೋಸು, ಹೂಕೋಸು, ಗೆಡ್ಡೆಕೋಸು, ಕ್ಯಾರೆಟ್, ಸೊಪ್ಪಿನ ತರಕಾರಿಗಳು ಮತ್ತು ಕೆಲವು ವಿದೇಶಿ ತರಕಾರಿಗಳಾದ ಲೆಟ್ಯೂಸ್, ಬ್ರೋಕೋಲಿ, ಬ್ರಸೆಲ್ಸ್ ಸ್ಪ್ರೌಟ್ಸ್, ಕಾಲೆ, ಲೀಕ್, ಸ್ವಿಸ್ ಚಾಚ್ ಇತ್ಯಾದಿ. ಈ ಬೆಳೆಗಳನ್ನು ಆರಿಸಿಕೊಳ್ಳುವಾಗ ಸೂಕ್ತವಾದ ತಳಿಗಳನ್ನು ಆರಿಸಿಕೊಳ್ಳವುದು ಅತೀ ಮುಖ್ಯ. ಅವುಗಳೆಂದರೆ ಟೊಮೆಟೊ-ಅರ್ಕಾ ರಕ್ಷಕ್, ಅರ್ಕಾ ಸಮ್ರಾಟ್, ಅರ್ಕಾ ಅಭೇದ್; ಆಲೂಗಡ್ಡೆ-ಕುಫ್ರಿಜ್ಯೋತಿ, ಕುಫ್ರಿ ಪುಕರಾಜ್; ತಿಂಗಳ ಹುರುಳಿಕಾಯಿ-ಅರ್ಕಾ ಅನೂಪ್, ಅರ್ಕಾ ಶರತ್, ಅರ್ಕಾ ಸುಕೋಮಲ್; ಎಲೆಕೋಸು - ಲೇಟ್ ಡ್ರಮ್ ಹೆಡ್, ಡ್ಯಾನಿಷ್ ಬಾಲ್ ಹೆಡ್; ಹೂಕೋಸು-ಅರ್ಕಾ ವಿಮಲ್, ಅರ್ಕಾ ಸ್ಫೂರ್ತಿ. ಚಳಿಗಾಲದ ಸಂದರ್ಭದಲ್ಲಿ ಎಲೆ ಚುಕ್ಕೆ ರೋಗ ಹಾಗೂ ಬೂದಿ ರೋಗ ಹೆಚ್ಚಾಗಿ ಕಂಡು ಬರುವ ಸಾಧ್ಯತೆ ಇದ್ದು ಸೂಕ್ತ ನಿರ್ವಹಣಾ ಕ್ರಮಗಳನ್ನು ಪಾಲಿಸತಕ್ಕದ್ದು.

ಡಾ. ಎಂ. ಶಾಲಿನಿ
ಸಹಾಯಕ ಪ್ರಾಧ್ಯಾಪಕರು
(ತೋಟಗಾರಿಕೆ) ಕೃಷಿ ವಿವಿ, ಬೆಂಗಳೂರು

09-11-2023
V-karanataka- Pg 13

ಶಿವಮೊಗ್ಗ ಜಿಲ್ಲೆಯಲ್ಲಿ ಎಲೆಚುಕ್ಕಿ ರೋಗ ಇಳಿಮುಖ | ಬೆಲೆಯಲ್ಲಿ ಸದ್ಯಕ್ಕೆ ಸ್ಥಿರತೆ

ಅಡಕೆ ತೋಟದ ರೋಗಗಳಿಗೆ ಪ್ರಕೃತಿ ಕಡಿವಾಣ

■ **ವಿಕ ಸುದ್ದಿಲೋಕ** ಶಿವಮೊಗ್ಗ

ಮಲೆನಾಡಿನಲ್ಲಿ ಕಳೆದ ವರ್ಷ ಅಡಕೆ ತೋಟಗಳನ್ನು ನಲುಗಿಸಿದ್ದ ಎಲೆಚುಕ್ಕಿ ಮತ್ತು ಇತರೆ ರೋಗಗಳನ್ನು ಈ ಬಾರಿ ಪ್ರಕೃತಿಯೆ ನಿಯಂತ್ರಣದಲ್ಲಿಟ್ಟಿದೆ. ಹವಾಮಾನದಲ್ಲಿ ವಿಪರೀತ ಬದಲಾವಣೆಗಳಾದಾಗ ಪ್ರಕೃತಿಯು ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುವಂತೆ ಅಡಕೆ ತೋಟಗಳನ್ನು ಬಾಧಿಸಿದ್ದ ಹಲವು ರೋಗಗಳನ್ನು ಪ್ರಕೃತಿ ನಿಯಂತ್ರಣದಲ್ಲಿಟ್ಟಿದೆ. ಕಳೆದ ವರ್ಷ ಆತಿಯಾದ ಮಳೆಯಿಂದಾಗಿ ಎಲೆಚುಕ್ಕಿ, ಕೊಳೆ, ಹಳದಿ ಎಲೆ, ಹಿಂಗಾರು ಒಣಗು, ಕಾಂಡಕೊರಕ, ಬೇರು ಹುಳ ಮತ್ತು ಇತರೆ ರೋಗಗಳು ತೋಟಗಳನ್ನು ಆವರಿಸಿಕೊಂಡು ಅಡಕೆ ಮರಗಳನ್ನು ನಲುಗಿಸಿದ್ದವು. ಕೇವಲ ತೋಟಗಳಲ್ಲದೆ ರೋಗ ನಿಯಂತ್ರಣದ ಪ್ರಯತ್ನದಲ್ಲಿ ರೈತರು ಸಹ ಸಂಕಷ್ಟೀಡಾಗಿದ್ದರು.

ಮುಖ್ಯವಾಗಿ ತೀರ್ಥಹಳ್ಳಿ, ಹೊಸನಗರ ಮತ್ತು ಸಾಗರ ತಾಲೂಕುಗಳಲ್ಲಿ ಎಲೆಚುಕ್ಕಿ ರೋಗ ವಿಪರೀತವಾಗಿತ್ತು. ನಿಯಂತ್ರಣಕ್ಕಾಗಿ ರೈತರು ಮಾಡಿದ ಪ್ರಯತ್ನಗಳು ಹೊಳೆಯಲ್ಲಿ ಹೋಮ ಮಾಡಿದಂತೆ ಆಗಿತ್ತು. ಹೀಗಾಗಿ ರೈತರು ತೋಟಗಾರಿಕೆ ಇಲಾಖೆ, ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ,



ಅಡಕೆ ಸಂಶೋಧನಾ ಕೇಂದ್ರದ ಅಧಿಕಾರಿಗಳನ್ನು ಕಂಡ ಕಂಡಲ್ಲಿ ತರಾಟೆಗೆ ತೆಗೆದುಕೊಳ್ಳುತ್ತಿದ್ದರು.

ಆತಿಯಾದ ಮಳೆಯಿಂದಾಗಿ ಥಂಡಿ ಮತ್ತು ವಾತಾವರಣದಲ್ಲಿನ ಆತಿಹೆಚ್ಚು ತೇವಾಂಶವು ಎಲೆಚುಕ್ಕಿ ರೋಗ ಉಲ್ಬಣಗೊಳ್ಳಲು ಕಾರಣವಾಗಿತ್ತು. ಈ ವರ್ಷ ವಾಡಿಕೆಗಿಂತ ಕಡಿಮೆಯಾದ ಮಳೆಯು ರೋಗಕ್ಕೆ ಕಡಿವಾಣ ಹಾಕಿದೆ. ಇಷ್ಟಾದರೂ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಕಡಿಮೆ ಇರುವುದು ರೈತರಲ್ಲಿ ಸಮಾಧಾನ ಮೂಡಿಸಿದೆ.

ಸುಧಾರಿಸಿದ ತೋಟದ ಆರೋಗ್ಯ: ಜಲಾಶಯಗಳ ಅಚ್ಚುಕಟ್ಟು ಪ್ರದೇಶದಲ್ಲಿನ ಅಡಕೆ ತೋಟಗಳ ಆರೋಗ್ಯ ಈ ವರ್ಷ ಸುಧಾರಿಸಿದೆ. ಜಲಾಶಯಗಳಲ್ಲಿ ನೀರು ಕಡಿಮೆ ಇರುವುದರಿಂದ ನಾಲೆಗಳಿಗೆ ಕಟ್ಟು ಪದ್ಧತಿಯಲ್ಲಿ ನೀರು ಹರಿಸಲಾಗುತ್ತಿದೆ. ನಾಲೆಯಲ್ಲಿ ನಿರಂತರ ನೀರು ಹರಿಯುವಾಗ ತೋಟಕ್ಕೆ ಹೆಚ್ಚು ನೀರು ಹರಿಸಿ ಸದಾ ತೇವಾಂಶ ಇರುವಂತೆ ಮಾಡಲಾಗುತ್ತಿತ್ತು. ಈ ವರ್ಷ 15 ದಿನಕ್ಕೊಮ್ಮೆ ನೀರು ಹಾಯಿಸುತ್ತಿರುವುದರಿಂದ ಹಾಗೂ ಮಳೆ ಸಹ ಕಡಿಮೆ ಇರುವುದರಿಂದ ಮರಗಳು ಚೆನ್ನಾಗಿವೆ ಎನ್ನುತ್ತಾರೆ ಅಚ್ಚುಕಟ್ಟು ಪ್ರದೇಶದ ರೈತರು.

ವರವಾದ ಸ್ಥಿರ ಧಾರಣೆ

ಮಾರುಕಟ್ಟೆಯಲ್ಲಿ ಅಡಕೆ ಧಾರಣೆ ಸ್ಥಿರವಾಗಿರುವುದು ಈ ಬಾರಿ ರೈತರಿಗೆ ವರವಾಗಿ ಪರಿಣಮಿಸಿದೆ. ಅರೆಮಲೆನಾಡು ಮತ್ತು ಬಯಲು ಪ್ರದೇಶದಲ್ಲಿ ಅಡಕೆ ಕೊಯ್ಲು ಮುಗಿಯುವ ಹಂತ ತಲುಪಿದರೆ ಮಲೆನಾಡಿನಲ್ಲಿ ದೀಪಾವಳಿ ಬಳಿಕ ಕೊಯ್ಲು ಆರಂಭವಾಗುತ್ತದೆ. ಸಾಮಾನ್ಯವಾಗಿ ಸುಗ್ಗಿ ಸಮಯದಲ್ಲಿ ಆಗುವಂತಹ ಸ್ವಲ್ಪಮಟ್ಟಿಗೆ ಏರಿಳಿತಗಳ ಹೊರತಾಗಿಯೂ ಧಾರಣೆ ಸ್ಥಿರವಾಗಿರುವುದು ಸಹ ರೈತರಲ್ಲಿ ಸಮಾಧಾನ ಮೂಡಿಸಿದೆ. ಡಿಸೆಂಬರ್ ಬಳಿಕ ಮಾರುಕಟ್ಟೆ ಆವಕ ಹೆಚ್ಚಾಗುವ ಸಾಧ್ಯತೆ ಇದೆ.

09-11-2023
V-karanataka- Pg 06

6 ಉತ್ಪನ್ನ ಪರಿಚಯಿಸಿದ ಸಹಕಾರ ಸಚಿವ ಅಮಿತ್ ಶಾ

'ಭಾರತ್ ಆರ್ಗ್ಯಾನಿಕ್ಸ್' ಬಿಡುಗಡೆ

ನವದೆಹಲಿ (ಪಿಟಿಐ): 'ಭಾರತ್ ಆರ್ಗ್ಯಾನಿಕ್ಸ್' ಎನ್ನುವ ಹೊಸ ಬ್ರ್ಯಾಂಡ್ ಅನ್ನು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಬುಧವಾರ ಬಿಡುಗಡೆ ಮಾಡಿದ್ದಾರೆ. ಈ ಬ್ರ್ಯಾಂಡ್ ಅಡಿಯಲ್ಲಿ ತೊಗರಿ, ಕಡಲೆ, ಸಕ್ಕರೆ, ಹುರುಳಿ, ಬಾಸ್ಮತಿ ಅಕ್ಕಿ ಮತ್ತು ಸೋನಾಮಸೂರಿ ಉತ್ಪನ್ನಗಳನ್ನು ಸಹ ಇದೇ ವೇಳೆ ಮಾರುಕಟ್ಟೆಗೆ ಪರಿಚಯಿಸಿದ್ದಾರೆ.

ಸದ್ಯ 6 ಉತ್ಪನ್ನಗಳನ್ನು ನೀಡಲಾಗಿದೆ. ಡಿಸೆಂಬರ್ ವೇಳೆಗೆ ಒಟ್ಟು 20 ಉತ್ಪನ್ನಗಳು ಈ ಬ್ರ್ಯಾಂಡ್ ಅಡಿಯಲ್ಲಿ ಲಭ್ಯವಾಗಲಿವೆ. ಮದರ್ ಡೇರಿಯ ಸಫಲ್ ಮಳಿಗೆಗಳು ಮತ್ತು ಆನ್‌ಲೈನ್‌ನಲ್ಲಿ ಮಾರಾಟ ಆಗಲಿವೆ. ದೇಶದಾದ್ಯಂತ ರಿಟೇಲ್ ಮಳಿಗೆಗಳ ಜಾಲವನ್ನೂ ಸೃಷ್ಟಿಸಲಾಗುವುದು ಎಂದು ಶಾ ತಿಳಿಸಿದ್ದಾರೆ.

ನ್ಯಾಷನಲ್ ಕೋ-ಆಪರೇಟಿವ್ ಆರ್ಗ್ಯಾನಿಕ್ಸ್ ಲಿಮಿಟೆಡ್ (ಎನ್‌ಸಿಒಎಲ್) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎನ್‌ಸಿಒಎಲ್ ಲೋಗೊ, ವೆಬ್‌ಸೈಟ್ ಅನ್ನೂ ಶಾ ಬಿಡುಗಡೆ ಮಾಡಿದ್ದಾರೆ. ಮೊದಲಿಗೆ ಭಾರತದಲ್ಲಿ ಆರ್ಗ್ಯಾನಿಕ್ಸ್ ಉತ್ಪನ್ನಗಳನ್ನು ಎನ್‌ಸಿಒಎಲ್ ಮಾರಾಟ ಮಾಡಲಿದೆ. ಕ್ರಮೇಣ ಜಾಗತಿಕ ಮಾರುಕಟ್ಟೆಯನ್ನೂ ಪ್ರವೇಶಿಸಲಿದೆ. ದೇಶದ ಅತ್ಯಂತ ವಿಶ್ವಾಸಾರ್ಹ ಬ್ರ್ಯಾಂಡ್ ಆಗಿ ರೂಪಿಸಲಾಗುವುದು. 10 ವರ್ಷಗಳಲ್ಲಿ 'ಭಾರತ್ ಆರ್ಗ್ಯಾನಿಕ್ಸ್' ಬ್ರ್ಯಾಂಡ್ ಅನ್ನು ಜಾಗತಿಕ ಮಾರುಕಟ್ಟೆಯಲ್ಲಿ ಬಲಿಷ್ಠ ಬ್ರ್ಯಾಂಡ್ ಆಗಿ ರೂಪಿಸಲಾಗುವುದು. ಇದಕ್ಕಾಗಿ ದೀರ್ಘಾವಧಿಯ ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದರು.

> **ಆರ್ಗ್ಯಾನಿಕ್ ಉತ್ಪನ್ನಗಳ ಮಾರಾಟದಿಂದ ಬರುವ ಲಾಭದಲ್ಲಿ ಶೇ 50ರಷ್ಟನ್ನು ಸದಸ್ಯ ರೈತರ ಖಾತೆಗೆ ವರ್ಗಾವಣೆ ಮಾಡಲಾಗುವುದು**
> **ಅಮಿತ್ ಶಾ,** ಕೇಂದ್ರ ಸಹಕಾರ ಸಚಿವ

10ನೇ ಪುಟ ನೋಡಿ

ಸಹಕಾರ ಸಂಘಗಳ ಮಾಹಿತಿ

7.89 ಕೋಟಿ
ದೇಶದಲ್ಲಿರುವ ಸಹಕಾರ ಸಂಘಗಳು

29 ಕೋಟಿ
ಸಹಕಾರ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ

ಆರ್ಗ್ಯಾನಿಕ್ ಕೃಷಿ

27 ಲಕ್ಷ ಹೆಕ್ಟೇರ್
ಭಾರತದಲ್ಲಿ ಆರ್ಗ್ಯಾನಿಕ್ ಪ್ರಮಾಣಪತ್ರ ಪಡೆದಿರುವ ಭೂಮಿ

29 ಲಕ್ಷ ಟನ್
2022-23ರಲ್ಲಿ ಭಾರತದಲ್ಲಿ ಉತ್ಪಾದನೆ ಆಗಿರುವ ಪ್ರಮಾಣೀಕೃತ ಆರ್ಗ್ಯಾನಿಕ್ ಉತ್ಪನ್ನಗಳು

09-11-2023
Prajavani- Pg 01



ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹಾಗೂ ಕೇಂದ್ರದ ರಾಜ್ಯ ಖಾತೆ ಸಚಿವ ಬಿ.ಎಲ್. ವರ್ಮಾ 'ಭಾರತ್ ಆರ್ಗ್ಯಾನಿಕ್ಸ್' ಉತ್ಪನ್ನಗಳನ್ನು ಬಿಡುಗಡೆ ಮಾಡಿದರು

'ಭಾರತ್ ಆರ್ಗ್ಯಾನಿಕ್ಸ್' ಬಿಡುಗಡೆ

ಒಂದನೇ ಪುಟದಿಂದ....

ಬ್ರ್ಯಾಂಡ್ ಬಲಪಡಿಸಲು ಪ್ರಯೋಗಾಲಯಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯ ಇದೆ. ಸದ್ಯ ದೇಶದಲ್ಲಿ 246 ಪ್ರಯೋಗಾಲಯಗಳಿದ್ದು, ನ್ಯಾಷನಲ್ ಪ್ಲಾಂಟ್ ಪ್ರೊಟೆಕ್ಷನ್ ಆರ್ಗನೈಸೇಷನ್ (ಎನ್‌ಪಿಪಿಒ) ಒಪ್ಪಿಗೆ ಪಡೆದಿರುವುದು 34 ಮಾತ್ರ. ಹೀಗಾಗಿ ಎನ್‌ಪಿಪಿಒ ಒಪ್ಪಿಗೆ ಪಡೆದ ಪ್ರಯೋಗಾಲಯಗಳ ಸಂಖ್ಯೆ ಹೆಚ್ಚಾಗಬೇಕಿದೆ ಎಂದಿದ್ದಾರೆ.

ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಹಾಗೂ ಇತರೆ ಸಂಘಗಳ ಬೆಂಬಲದೊಂದಿಗೆ ಮುಂದಿನ ವರ್ಷಗಳಲ್ಲಿ ಸರ್ಕಾರವು ಹೆಚ್ಚುವರಿಯಾಗಿ 305 ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುವುದು. ಇದರಲ್ಲಿ 100 ಮೊಬೈಲ್ ಪ್ರಯೋಗಾಲಯ ಇರಲಿದೆ ಎಂದು ಮಾಹಿತಿ ನೀಡಿದ್ದಾರೆ.

ಆರ್ಗ್ಯಾನಿಕ್ ಉತ್ಪನ್ನಗಳ ದರವು ಹೆಚ್ಚಿಗೆ ಇರುವುದರಿಂದ ಹಲವು ನಕಲಿ ಆರ್ಗ್ಯಾನಿಕ್ ಉತ್ಪನ್ನಗಳು ಸಹ ಮಾರುಕಟ್ಟೆಯಲ್ಲಿವೆ. ಹೀಗಾಗಿ ರೈತರು ಮತ್ತು ಖರೀದಿದಾರ, ಈ ಇಬ್ಬರ ಸಮಸ್ಯೆಗಳನ್ನೂ ಎನ್‌ಸಿಒಎಲ್ ಪರಿಹರಿಸಲಿದೆ ಎಂದು ಶಾ ತಿಳಿಸಿದ್ದಾರೆ.

2022-23ರಲ್ಲಿ ಭಾರತವು 3.12 ಲಕ್ಷ ಟನ್‌ನಷ್ಟು ಆರ್ಗ್ಯಾನಿಕ್ ಉತ್ಪನ್ನಗಳನ್ನು ರಫ್ತು ಮಾಡಿದ್ದು ಮೌಲ್ಯದ ಲೆಕ್ಕದಲ್ಲಿ ₹5,525 ಕೋಟಿ ಆಗಿದೆ. ಅಮೆರಿಕ, ಐರೋಪ್ಯ ಒಕ್ಕೂಟ, ಕೆನರಾ ಮತ್ತು ಇತರೆ ದೇಶಗಳಿಗೆ ರಫ್ತು ಮಾಡಲಾಗಿದೆ.